Mr. SPEAKER.—That also does not arise.

Sri M. P. PATIL.—That is a hypothetical question.

ಶ್ರೀ ಎಚ್. ಜಿ. ನರಸಿಂಹೇಗೌಡ.—ನೌಕರರು ಮತ್ತು ಕಾರ್ಮಿಕರು ರಿಟೈರ್ ಆದಮೇಲೆ ಅವರ ಮಕ್ಕಳು ಮೆಜಾರಿಟಿಗೆ ಬಂದಾಗ ಜಮೀನುಕೊಡುವ ವಿಚಾರದಲ್ಲಿ ಸರ್ಕಾರದ ಅಭಿಪ್ರಾಯವೇನು ?

ಶ್ರೀ ಎಂ. ಪಿ. ಪಾಟೀಲ್.—ರಿಟೈರ್ ಆದವರು ಸಾಗುವಳಿಮಾಡುವುದಾದರೆ ಅವರಿಗೆ ಕೊಡುತ್ತಾರೆ, ಮಕ್ಕಳು ಸಾಗುವಳಿಮಾಡಿದರೆ ಅವರಿಗೆ ಕೊಡುತ್ತಾರೆ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಈ ವಿಷಯದಲ್ಲಿ ಸರ್ಕಾರದವರು ಪ್ರೆಸ್‌ನೋಟ್ ಹೊರಡಿಸುವರೆ ?

Mr. SPEAKER.—That is a suggestion for action.

ಶ್ರೀ ಎಸ್. ನುಬ್ಬಯ್ಯನಾಯಕ್.—ನೌಕರರು ಸ್ವತಃ ಸಾಗುವಳಿಮಾಡುವುದಾದರೆ ಅವರಿಗೇಕೆ ಜಮೀನು ಕೊಡಬಾರದು ?

ಅಧ್ಯಕ್ಷರು.—ಅದಕ್ಕೆ ಉತ್ತರ ಹೇಳಿದ್ದಾರೆ.

ಶ್ರೀ ಕೆ. ಎಲ್. ನರಸಿಂಹಯ್ಯ.—ಒಂದು ನಂಸಾರಕ್ಕೆ ಖುಷ್ಕಿ, ತರಿ, ಬಾಗಾಯ್ತು ಎಲ್ಲಾ ಸೇರಿ ಹತ್ತು ಎಕರೆ ಜಮೀನಿರಬೇಕೆಂದು ಹೊಸದಾಗಿ ನಿಗದಿಮಾಡಿಲ್ಲವೆ ?

ಶ್ರಿ ಎಂ. ಪಿ. ಪಾಟೀಲ್.—ಇಲ್ಲ ; ಈಗ ಲ್ಯಾಂಡ್ ರೆವೆನ್ಯೂ ರೂಲ್ಸ್ ಪ್ರಕಾರ ನಡೆಯುತ್ತಿದೆ.

Appointment of Advisory Committees to the District Boards.

Q.—382. Sri G. N. PUTTANNA (Tumkur).—

Will the Government be pleased to state:—

(*a*) whether it is a fact that they are contemplating to appoint an Advisory Committee to the District Boards in the old Mysore State ;

(*b*) whether it is a fact that they are contemplating to nominate only the members of the Congress Party as members of the Advisory Committee ;

(*c*) whether there is any liklihood of holding elections to form District Boards in the old Mysore State ;

(*d*) if so, when ?

A.—Sri R. CHENNIGARAMIAH (Minister for Local Self-Government).—

(*a*) Advisory Committees for some of the District Boards have already been constituted.

(*b*) No.

(*c*) Yes.

(*d*) May be in February or March, 1958.

ಶ್ರೀ ಜಿ. ಎಚ್. ಪುಟ್ಟಣ್ಣ.—ತಮ್ಮ ಸ್ಥಳ ಕೊರಟಗೆರೆಯಲ್ಲವೆ ?

ಅಧ್ಯಕ್ಷರು.—ಅದಕ್ಕೂ ಈ ಪ್ರಶ್ನೆಗೂ ಏನು ಸಂಬಂಧ ?

ಶ್ರೀ ಜಿ. ಎಚ್. ಪುಟ್ಟಣ್ಣ.—ಸ್ವಾಮಿ, ತಮ್ಮ ಸ್ಥಳ ಕೊರಟಗೆರೆಯಲ್ಲವೇ ?

ಅಧ್ಯಕ್ಷರು.—ತಾವು ಈ ರೀತಿಯಾದ ಪ್ರಶ್ನೆಗಳನ್ನು ಕೇಳಕೂಡದು.

ಶ್ರೀ ಜಿ. ಎಚ್. ಪುಟ್ಟಣ್ಣ.—ಉತ್ತರದಲ್ಲಿ ಕೆಲವು ಡಿಸ್ಟ್ರಿಕ್ಟು ಬೋರ್ಡುಗಳಿಗೆ ಮಾತ್ರ ಈ ರೀತಿಯಾದ ಸಲಹಾಸಮಿತಿಗಳನ್ನು ಏರ್ಪಡಿಸಲಾಗಿದೆ ಎಂದು ತಿಳಿಸಿದ್ದೀರಿ. ಯಾವ ಯಾವ ಡಿಸ್ಟ್ರಿಕ್ಟಿಗೆ ಕೊಟ್ಟಿದ್ದೀರಿ, ಯಾವ ಯಾವುದಕ್ಕೆ ಕೊಟ್ಟಿಲ್ಲ ಎನ್ನುವುದನ್ನು ತಿಳಿಸುತ್ತೀರಾ ?

*ಶ್ರೀ ಆರ್. ಚೆನ್ನಿಗರಾಮಯ್ಯ.—ತಮಗೆ ಉತ್ತರ ಕಳುಹಿಸಿದ ಮೇಲೆ ಈಗ ಎಲ್ಲ ಡಿಸ್ಟ್ರಿಕ್ಟುಗಳಿಗೂ ಏರ್ಪಾಟು ಮಾಡಿದ್ದೇವೆ.

ಶ್ರೀ ಜಿ. ಎಚ್. ಪುಟ್ಟಣ್ಣ.—ತುಮಕೂರು ಜಿಲ್ಲೆಯಲ್ಲಿ ಯಾವ ತಾರೀಖಿನಿಂದ ಮಾಡಿದ್ದೀರಿ ಅದನ್ನು ತಿಳಿಸುತ್ತೀರಾ ?

ಶ್ರೀ ಆರ್. ಚೆನ್ನಿಗರಾಮಯ್ಯ.—ತಾರೀಖು ಆ ಗೆಜೆಟ್ಟು ನೋಟಿಫಿಕೇಷನ್ನಿನಲ್ಲಿ ಪ್ರಿಂಟಾಗಿದೆ.

ಶ್ರೀ ಜಿ. ಎಚ್. ಪುಟ್ಟಣ್ಣ.—ನಾನು ಕೊಟ್ಟ ಇಂಟರ್‌ಪೆರೇಷನ್ನು ಬಂದಮೇಲೆ ಮಾಡಿದರೋ ಇಲ್ಲ ಅದಕ್ಕೆ ಮುಂಚೆಯೋ?

ಶ್ರೀ ಆರ್. ಚೆನ್ನಿಗರಾಮಯ್ಯ.—ನೀವು ಕೊಟ್ಟ ಇಂಟರ್‌ಪರೇಷನ್ನು ಬಂದ ಮೇಲೆ ಮಾಡಲಾಯಿತು.

ಶ್ರೀ ಜಿ. ಎನ್. ಪುಟ್ಟಣ್ಣ.—ಕೊರಟಗೆರೆಗೆ ನಾಲ್ಕು ಜನರನ್ನು ಕೊಡಲು ಕಾರಣವೇನು ?

ಅಧ್ಯಕ್ಷರು.—ಹೀಗೆ ತಾವು ಜನರಲ್‌ಆಗಿ ಪ್ರಶ್ನೆ ಕೇಳಿದರೆ ಹೇಗೆ ?

ಶ್ರೀ ಜಿ. ಎಚ್. ಪುಟ್ಟಣ್ಣ.—ಹಾಗಲ್ಲ ಇದಕ್ಕೆ ಕಾರಣ ಕೆಲವು ಡಿಸ್ಟ್ರಿಕ್ಟುಗಳಲ್ಲಿ ಎರಡು ಮತ್ತು ಮೂರು ಜನಗಳನ್ನೂ ಮತ್ತೆ ಕೆಲವು ಜಾಗಗಳಲ್ಲಿ ಹೆಚ್ಚಿನ ಜನಗಳನ್ನೂ ತೆಗೆದುಕೊಂಡಿದ್ದಾರೆ. ಹೀಗಾದರೆ ದೊಡ್ಡ ದೊಡ್ಡ ತಾಲ್ಲೂಕುಗಳಲ್ಲಿ ಕೆಲಸ ಹೇಗೆ ಆಗುತ್ತದೆ ?

ಅಧ್ಯಕ್ಷರು.—ಇದು ಸಾಮಾನ್ಯ ಪ್ರಶ್ನೆ. ತಮ್ಮಲ್ಲಿ ಇಂಫರ್‌ಮೇಷನ್ನು ಇದ್ದರೆ, ಇಷ್ಟಪಟ್ಟರೆ ಉತ್ತರವನ್ನು ಕೊಡಬಹುದು.

ಶ್ರೀ ಆರ್. ಚೆನ್ನಿಗರಾಮಯ್ಯ.—ಆಯಾ ಜಿಲ್ಲೆಗಳ ಪ್ರಾತಿನಿಧ್ಯವನ್ನು ನೋಡಿ ಆಯಾ ತಾಲ್ಲೂಕುಗಳನ್ನೂ ನೋಡಿಕೊಂಡು ಹಂಚಬೇಕಾಗಿದೆ. ಕೆಲವು ಜಿಲ್ಲೆಗಳಲ್ಲಿ ಮೈನಾರಿಟೀಸ್‌ಗಳಿಗೆ ಪ್ರಾತಿನಿಧ್ಯದ ಮೇಲೆ ಕೊಡುವುದಕ್ಕಾಗಿ ಐದು ಜನಗಳನ್ನು ಕೊಡಬೇಕಾಗಬಹುದು. ಈಗ ಕೊರಟಗೆರೆಯಲ್ಲಿ ಜನರಲ್ ಸೀಟಿಗಾಗಿ ಕೊಟ್ಟಿರುವುದು ಎರಡೇ ಮತ್ತು ಉಳಿದ ಇಬ್ಬರಲ್ಲಿ ಒಬ್ಬರು ಮುಸ್ಲಿಂ ಮತ್ತು ಒಬ್ಬರು ಹರಿಜನರಿಗೆ ಹೀಗೆ ಕೊಡಬೇಕಾಗಿ ಬಂದಿರಬಹುದು. ಇದರಲ್ಲಿ ತಾಲ್ಲೂಕಿನ ಕನ್ಸಿಡರೇಷನ್ನು ಎಲ್ಲಿಂದ ಬರುತ್ತದೆ? ಒಂದು ತಾಲ್ಲೂಕಿನಲ್ಲಿ ಐದು ಜನಗಳು ಮೈನಾರಿಟೀಸ್‌ಗಳನ್ನು ಪ್ರತಿನಿಧಿಸಬಹುದು. ಅದರಿಂದ ಈ ರೀತಿಯಾಗಿದೆ.

ಶ್ರೀ ಜಿ. ಎಚ್. ಪುಟ್ಟಣ್ಣ.—ಈಗ ತಾವು ನೇಮಕ ಮಾಡಿರುವ 29 ಜನಗಳ ಪೈಕಿ ನಾಲ್ಕು ಜನಗಳನ್ನು

(ಶ್ರೀ ಜಿ. ಎಚ್. ಪುಟ್ಟಣ್ಣ)
ಬಟ್ಟು 25 ಜನಗಳನ್ನು ಕಾಂಗ್ರೆಸ್ಸು ಪಕ್ಷದಿಂದ ನೇಮಿಸಿರುವುದು ಸರಿಯಾದ ನೀತಿಯೇ?

(ಉತ್ತರವಿಲ್ಲ.)

ಶ್ರೀ ಜಿ. ಎನ್. ಪುಟ್ಟಣ್ಣ.—ಅಲ್ಲರುವವರಲ್ಲಿ ಎಷ್ಟುಜನ ಕಾಂಗ್ರೆಸ್ಸಿನ ಮೆಂಬರುಗಳಿದ್ದಾರೆ?

ಶ್ರೀ ಆರ್. ಚೆನ್ನಿಗರಾಮಯ್ಯ.—ಅವೆಲ್ಲ ಗೆಜಿಟ್ಟಿನ ನೋಟಿಫಿಕೇಷನ್ನಲ್ಲಿಯೇ ಇದೆ.

ಶ್ರೀ ಜಿ. ಎಚ್. ಪುಟ್ಟಣ್ಣ.—ಹಾಗಾದರೆ ತೆಗೆದು ಕೊಂಡಿಲ್ಲವೆಂದು ಹೇಳುತ್ತೀರಾ?

ಶ್ರೀ ಆರ್. ಚೆನ್ನಿಗರಾಮಯ್ಯ.—ಅದು ನಿಮ್ಮ ಅಭಿಪ್ರಾಯ ಆಗಬಹುದು.

Sri J. H. SHAMSUDDIN.—Is it a disqualification to belong to a particular party to become members of the advisory committees of the local bodies?

Sri R. CHENNIGARAMIAH.—No.

ಶ್ರೀ ಎಂ. ಮುನಿಯಪ್ಪ.—ಸ್ವಾಮೀ, ಕಾಂಗ್ರೆಸ್ಸಿನವರು ಎಂದು ಹೇಳುತ್ತಾರಲ್ಲ; ಹಾಗೆ ಕಾಂಗ್ರೆಸ್ಸಿನವರೆಂದು ಮುದ್ರೆಯನ್ನೇನಾದರೂ ಒತ್ತಿದ್ದಾರೆಯೇ?

ಶ್ರೀ ಆರ್. ಚೆನ್ನಿಗರಾಮಯ್ಯ.—ಹಾಗೇನೂ ಮುದ್ರೆ ಒತ್ತಿಲ್ಲ.

ಶ್ರೀ ಎಸ್. ಆರ್. ರಾಮಯ್ಯ.—ಬಳ್ಳಾರಿ ಡಿಸ್ಟ್ರಿಕ್ಟ್ ಅಡ್ವೈಸರಿ ಕಮಿಟಿಯನ್ನು ನೇಮಿಸಿದ್ದೀರಾ?

ಶ್ರೀ ಆರ್. ಚೆನ್ನಿಗರಾಮಯ್ಯ.—ನೇಮಿಸಿಲ್ಲ.

ಶ್ರೀ ಎಸ್. ಆರ್. ರಾಮಯ್ಯ.—ಬಳ್ಳಾರಿ ಡಿಸ್ಟ್ರಿಕ್ಟ್ ಬೋರ್ಡಿನ ಆಕ್ಟ್‌ನ ಪ್ರಕಾರ ಅಡ್ವೈಸರಿ ಸಮಿತಿಗಳನ್ನು ಮಾಡುವುದಕ್ಕೆ ಪ್ರಾವಿಷನ್ನು ಇಲ್ಲ. ಹಳೆಯ ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನ ಆಕ್ಟಿನ ಪ್ರಕಾರ ಈ ರೀತಿಯಾದ ಅಡ್ವೈಸರಿ ಕಮಿಟಿಗಳನ್ನು ನೇಮಿಸುವುದಕ್ಕೆ ಅವಕಾಶವಿದೆ. ಮೈಸೂರಿಗೆ ಸೇರಿ ಎರಡು ಮೂರು ವರ್ಷಗಳಾದರೂ ಈ ಕಡೆಗೆ ಈ ಮೈಸೂರಿನ ರೂಲ್ಸುಗಳನ್ನು ಏಕೆ ಜಾರಿಗೆ ತರುತ್ತಿಲ್ಲ?

ಶ್ರೀ ಆರ್. ಚೆನ್ನಿಗರಾಮಯ.—ಈಗ ಇದಕ್ಕೆ ಹೊಸದಾಗಿ ಅಮೆಂಡ್‌ಮೆಂಟು ಮಾಡಬೇಕಾಗಿದೆ. ಹಾಗೆ ಮಾಡಿದರೆ ಇದಕ್ಕೆ ಅವಕಾಶವಾಗುತ್ತದೆ. ಹೊಸದಾಗಿ ಈಗ ಯೂನಿಫಾರಂ ರಾಸ್‌ಗಳನ್ನು ಮಾಡಬೇಕೆಂದಿದೆ. ಇವುಗಳನ್ನೆಲ್ಲ ಸರಿಯಾಗಿ ಯೋಚನೆ ಮಾಡಿ ಮಾಡಬೇಕು.

ಶ್ರೀ ಎಂ. ರಾಮಪ್ಪ.—ಅಡ್ವೈಸರಿ ಕಮಿಟಿಗಳಿಗೆ ನೇಮಕ ಮಾಡಿರುವುದರಲ್ಲಿ ಕೆಲವರು ತಾಲ್ಲೂಕು ಕಾಂಗ್ರೆಸ್ಸು ಸಮಿತಿಯ ಸೆಕ್ರೆಟರಿಗಳು, ಅಧ್ಯಕ್ಷರುಗಳು, ಡಿಸ್ಟ್ರಿಕ್ಟು ಕಾಂಗ್ರೆಸ್ಸಿನ ಅಧ್ಯಕ್ಷರುಗಳು ಆಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಆರ್. ಚೆನ್ನಿಗರಾಮಯ್ಯ.—ಅವರುಗಳು ಅಡ್ವೈಸ್ಸುಗಳನ್ನು ಕಳುಹಿಸಿರುವುದು ಆ ರೀತಿಯಾಗಿದೆ. ಕೆಲವರು ಆ ರೀತಿಯಾಗಿ ತಾಲ್ಲೂಕಿನಲ್ಲಿ ಮತ್ತು ಜಿಲ್ಲೆಗಳಲ್ಲಿ ಪ್ರೆಸಿಡೆಂಟರಾಗಿರಬಹುದು. ಅದರಂತೆ ಅಡ್ವೈಸ್ಸನ್ನು ಕೊಟ್ಟಿರುವುದು ತಪ್ಪು ಎಂದು ಹೇಳುವುದಕ್ಕಾಗುತ್ತದೆಯೇ? ಕೆಲವರು ನಮ್ಮಲ್ಲಿ ಬಂದು ಅವರು ಇಂತಹ ಸಂಘಕ್ಕೆ ಪ್ರೆಸಿಡೆಂಟರಾಗಿರುವುದರಿಂದ ಪ್ರಾತಿನಿಧ್ಯ ಕೊಡಿ ಎಂದು ಕೇಳಿದರೆ ಕೊಡ ಬೇಕಾಗುತ್ತದೆ. ಕೆಲವರು ಹರಿಜನರ ಸಂಘವೆಂದು ಬಂದು ಹೇಳುತ್ತಾರೆ. ಅವರಿಗೆಲ್ಲ ನಾವು ಕೊಡಬೇಕಾಗುತ್ತದೆ.

Sri V. S. PATIL.—May I know, Sir, whether to be nominated on these committees, it is a necessary qualification to be a member of the Congress Party?

Sri R. CHENNIGARAMIAH.—No.

Sri G. SHIVAPPA.—Is it a fact that some members after their nomination have submitted their resignation to the Government?

Sri R. CHENNIGARAMIAH.—Yes.

Sri G. SHIVAPPA.—Is it not a fact that these members belong to the Congress Party?

Sri R. CHENNIGARAMIAH.—I have no idea.

ಶ್ರೀ ಜಿ. ವೆಂಕಟೇಗೌಡ.—ಕೊಳ್ಳೇಗಾಲದ ತಾಲ್ಲೂಕು ಈಗ ಮೈಸೂರು ಜಿಲ್ಲೆಗೆ ಸೇರಿರುವುದರಿಂದ ಮೈಸೂರು ಜಿಲ್ಲಾ ಬೋರ್ಡುಗಳ ನಿಯಮಗಳನ್ನು ಇದಕ್ಕೂ ಅನ್ವಯ ಮಾಡಿದ್ದೀರಾ? ಅಥವಾ ಮೈಸೂರು ಲೋಕಲ್ ಬೋರ್ಡಿನ ಆಕ್ಟನ್ನು ಅಮೆಂಡು ಮಾಡಿ ಅನ್ವಯಿಸಿದ್ದೀರೋ?

ಶ್ರೀ ಆರ್. ಚೆನ್ನಿಗರಾಮಯ್ಯ —ಕೊಳ್ಳೇಗಾಲದ ತಾಲ್ಲೂಕು ಮೈಸೂರಿನ ಜಿಲ್ಲಾಬೋರ್ಡಿನ ಆಕ್ಟಿಗೆ ಅನ್ವಯವಾಗುತ್ತದೆ. ಮೊದಲಿದ್ದ ಮೈಸೂರಿನ ಜಿಲ್ಲಾ ಬೋರ್ಡಿನ ಆಕ್ಟನ್ನೂ ಮದರಾಸಿನ ಲೋಕಲ್ ಬೋರ್ಡಿನ ಆಕ್ಟನ್ನೂ ಅಡಾಪ್ಟ್ ಮಾಡಿಕೊಂಡು ಬರುತ್ತಿದ್ದೇವೆ.

Sri M. C. NARASIMHAN.—Sir, you said that belonging to a political party was not a disqualification so far as the membership of the advisory committees were concerned. May I know whether in the Committee relating to Kolar District, if there are any non-congressmen?

Sri R. CHENNIGARAMIAH.—I have no idea. I have already replied to such a question.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈ ರೀತಿಯಾದ ಸಮಿತಿಗಳಿಗೆ ಸರಕಾರವು ಅನುಸರಿಸುವ ನೀತಿಗಳೇನು?

ಶ್ರೀ ಆರ್. ಚೆನ್ನಿಗರಾಮಯ್ಯ.—ಲೋಕಲ್ ಬಾಡೀಸ್‌ಗಳಿಗಿರುವಂತೆ ಡಿಸ್ಟ್ರಿಕ್ಟು ಬೋರ್ಡುಗಳಿಗೂ ಇರುವ ನಿಯಮಗಳನ್ನೇ ಅನುಸರಿಸುತ್ತ ಮಾಡಿದೆ.

Sri C. J. MUKKANNAPPA.—May I know who recommended these names to be appointed as members of the advisory committees of the District Board, Sir?

Sri R. CHENNIGARAMIAH.—Government have got their own sources of ascertaining and they have appointed accordingly.

ಶ್ರೀ ಎಚ್. ಜಿ. ನರಸಿಂಹೇಗೌಡ.—ಉತ್ತರ (ಬ) ನಲ್ಲೇ ಸಲಹಾ ಸಮಿತಿಗೆ ಸದಸ್ಯರನ್ನಾಗಿ ಕಾಂಗ್ರೆಸ್ಸಿನ

ಪಕ್ಷದ ಸದಸ್ಯರನ್ನು ಮಾತ್ರವೇ ಸರಕಾರ ನೇಮಿಸಿರುವುದು ನಿಜವಲ್ಲ ಎಂದು ಹೇಳಿದ್ದಾರೆ. ಆದರೂ ಈಗ ನೇಮಿಸಿರುವವರೆಲ್ಲ ಕಾಂಗ್ರೆಸ್ಸಿನವರು ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಅದು ತಮ್ಮ ಅಭಿಪ್ರಾಯ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಈಗ ನಾಲ್ಕು ವರ್ಷಗಳಿಂದ ಜಿಲ್ಲಾ ಬೋರ್ಡುಗಳಿಗೆ ಚುನಾವಣೆಗಳು ನಡೆದಿಲ್ಲ. ಹಾಗಿದ್ದರೂ ಕೂಡ ಇನ್ನು ಎಂಟು ತಿಂಗಳಲ್ಲಿ ಚುನಾವಣೆಯಾಗುವಾಗ ಈ ರೀತಿಯಾದ ಸಮಿತಿಗಳನ್ನು ನೇಮಕಮಾಡಲು ಅಗತ್ಯವೇನಿತ್ತು ?

ಶ್ರೀ ಆರ್. ಚೆನ್ನಿಗರಾಮಯ್ಯ.—ಅನೇಕ ಜಿಲ್ಲಾಧಿಕಾರಿಗಳಿಂದಲೂ ಮತ್ತು ಇನ್ನಿತರಕಡೆಗಳಿಂದಲೂ ಈ ರೀತಿಯ ಸಮಿತಿಗಳನ್ನು ರಚಿಸಲು ಒತ್ತಾಯ ಬಂದಿದ್ದುದರಿಂದ ಈ ರೀತಿಯಾಗಿ ಸಮಿತಿಗಳನ್ನು ರಚನೆ ಮಾಡಬೇಕಾಯಿತು.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಜಿಲ್ಲಾ ಕಾಂಗ್ರೆಸ್ಸು ಸಮಿತಿಗಳಿಂದ ಮತ್ತು ತಾಲ್ಲೂಕು ಕಾಂಗ್ರೆಸ್ಸು ಸಮಿತಿಗಳಿಂದ ಇಂತಹವರನ್ನೇ ನೇಮಿಸಬೇಕೆಂದು ಪಟ್ಟಿಯನ್ನೇನಾದರೂ ಕಳುಹಿಸಿದ್ದೀರಾ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಇಲ್ಲ.

Sri J. H. SHAMSUDDIN.—Sir, will the Government satisfy the Opposition by getting some of them on these committees Sir ?

Sri R. CHENNIGARAMIAH.—There are some non-Congressmen I believe on these committees.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಕೊಳ್ಳೇಗಾಲಕ್ಕೆ ಸಂಬಂಧಪಟ್ಟ ಹಾಗೆ ಮೈಸೂರು ಜಿಲ್ಲಾ ಬೋರ್ಡಿನ ರೂಲ್ಸುಗಳನ್ನು ಅನ್ವಯ ಮಾಡುತ್ತೇನೆಂದು ಹೇಳಿದಿರಿ. ಅದಕ್ಕೆ ಏನಾದರೂ ಕಾನೂನನ್ನು ರಚನೆ ಮಾಡಿದ್ದೀರಾ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಅದಕ್ಕೆ ಇನ್ನೂ ಕಾನೂನು ರಚನೆಮಾಡಿಲ್ಲ. ಈಗಿರುವ ಜಿಲ್ಲಾ ಬೋರ್ಡಿನ ಆಕ್ಟನ್ನು ಅಡಾಪ್ಟು ಮಾಡಿಕೊಂಡು ಅನ್ವಯಿಸುತ್ತಿದ್ದೇವೆ.

ಶ್ರೀ ಎಂ. ಲಿಂಗೇಗೌಡ.—ಈ ಹೆಸರುಗಳನ್ನು ತಾಲ್ಲೂಕು ಕಾಂಗ್ರೆಸ್ಸು ಕಮಿಟಿಯಿಂದ ತರಿಸಿಕೊಂಡಿದ್ದೀರಾ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಇಲ್ಲ.

ಶ್ರೀ ಎಂ. ಲಿಂಗೇಗೌಡ.—ಡಿಸ್ಟ್ರಿಕ್ಟು ಕಾಂಗ್ರೆಸ್ಸಿನ ಕಮಿಟಿಯವರಿಂದ ತರಿಸಿಕೊಂಡಿದ್ದೀರಾ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಇಲ್ಲ.

ಶ್ರೀ ಎಂ. ಲಿಂಗೇಗೌಡ.—ಹಾಗಾದರೆ ತಮಗೆ ಇನ್ ಫರ್‌ಮೇಷನ್ನನ್ನು ಕೊಟ್ಟವರು ಯಾರು ?

ಶ್ರೀ ಆರ್. ಚೆನ್ನಿಗರಾಮಯ್ಯ.—ಆಯಾ ಪ್ರದೇಶಗಳಲ್ಲಿರುವ ಪ್ರಮುಖರು ಮತ್ತು ಲಿಂಗೇಗೌಡರಂತಹ ಮುಖಂಡರುಗಳಿಂದ ತರಿಸಿದ್ದೇವೆ.

ಶ್ರೀ ಜಿ. ಎಸ್. ಪುಟ್ಟಣ್ಣ.—ಸ್ವಾಮಿ, 25 ಜನರನ್ನು ನಾಮಿನೇಟ್ ಮಾಡಿದ್ದಾರೆ, ಇದರಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ಕಂಟ್ರಾಕ್ಟರುಗಳೂ ಇದ್ದಾರೆಂಬುದು ಗೊತ್ತಿದೆಯೇ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಗೊತ್ತಿಲ್ಲ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಇಂಥಿಂಥವರನ್ನು ನಾಮಿನೇಟ್‌ಮಾಡಿ ಎಂದು ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಯವರು ಹೇಳಿದರೆ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಅಲ್ಲ, ತಮ್ಮಂಥವರು ಹೇಳಿದ್ದಾರೆ.

ಶ್ರೀ ಇ. ನಾರಾಯಣಗೌಡ.—ಚುನಾವಣೆಯಲ್ಲಿ ಸೋತವರಿದ್ದಾರೆಯೇ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಇದ್ದರೆ ತಪ್ಪಲ್ಲ.

ಶ್ರೀ ಇ. ನಾರಾಯಣಗೌಡ.—ಠೇವಣಿ ಕಳೆದುಕೊಂಡವರಿರಬಹುದಲ್ಲವೇ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಇರಬಹುದು, ಇದೇನೂ ಅನರ್ಹತೆಯಲ್ಲ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಠೇವಣಿ ಕಳೆದುಕೊಂಡಿರುವವರು ಯಾರೂ ಇಲ್ಲವೆಂಬುದು ಗೊತ್ತಿದೆಯೇ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಇಲ್ಲ.

Sri H. C. LINGAREDDY.—Is there a proposal before the Government to abolish the District Boards and not to hold the elections as in Madras ?

Sri R. CHENNIGARAMIAH.—That is also under consideration.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಅಡ್ವೈಜರಿ ಸಮಿತಿ ನೇಮಕಮಾಡುವಾಗ ಕೇಳಿ ಮಾಡಿದೆವು ಎಂದು ಹೇಳಿದರು, ಯಾರನ್ನು ಕೇಳಿದರು ?

ಶ್ರೀ ಆರ್. ಚೆನ್ನಿಗರಾಮಯ್ಯ.—ಸರ್ಕಾರದವರು ಕೇಳಿದರು.

ಶ್ರೀ ಜೆ. ಮುಕ್ಕಣ್ಣಪ್ಪ.—ಯಾರನ್ನು ಕೇಳಿದರು ?

ಶ್ರೀ ಆರ್. ಚೆನ್ನಿಗರಾಮಯ್ಯ.—ನಮಗೆ ಯಾರನ್ನು ಕೇಳಬೇಕೆಂದು ತೋರಿತೋ ಅವರನ್ನು ಕೇಳಿದೆವು.

ಶ್ರೀ ಎಂ. ಎಂ. ಪಾಟೀಲ್.—ಸ್ಪೆಷಲ್ ಆಫೀಸರಿಗೆ ಅವರ regular work ಹೆಚ್ಚಾಗಿರುವುದರಿಂದ ಈ ಕೆಲಸ ಕಾರ್ಯಗಳನ್ನು ಸರಿಯಾಗಿ ನೋಡಿಕೊಳ್ಳುವುದಕ್ಕಾಗುವುದಿಲ್ಲವೆಂಬ ಕಾರಣದಿಂದ ಈ ಸಮಿತಿಗಳನ್ನು ನೇಮಕ ಮಾಡಿದ್ದಲ್ಲವೇ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಹೌದು.

ಶ್ರೀ ಎಂ. ಎಂ. ಪಾಟೀರ್.—ಬಳ್ಳಾರಿಯಲ್ಲಿ ವಿಶೇಷಾಧಿಕಾರಿಗಳಿಗೆ ತಮ್ಮ regular work ಹೆಚ್ಚಾಗಿರುವುದರಿಂದ ಜಿಲ್ಲಾಬೋರ್ಡಿನ ಕೆಲಸ ಕಾರ್ಯಗಳು ಸಾಕಷ್ಟು ಪ್ರಗತಿಗೆ ಬರಲು ಆಗುವುದಿಲ್ಲವಾದ ಕಾರಣ ಇದನ್ನು ಅಲ್ಲಿಯೂ ಜಾರಿಗೆ ತರುವುದಕ್ಕೆ ತೊಂದರೆಯೇನು ?

ಅಧ್ಯಕ್ಷರು.—ಅದಕ್ಕೆ ಉತ್ತರ ಕೊಟ್ಟಿದ್ದಾರೆ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಚುನಾವಣೆಗಳನ್ನು ಮುಂದಿನ ಫೆಬ್ರುವರಿ ಅಥವ ಮಾರ್ಚಿಯಲ್ಲಿ ನಡೆಸಬಹುದೆಂದು ಹೇಳಿದ್ದೀರಿ, ಚುನಾವಣೆಗೆ ಹಿಂದಿನ ರೂಲ್ಸ್ ಅನುಸರಿಸುತ್ತಾರೋ ಅಥವ ಹೊಸರೂಲ್ಸ್ ಮಾಡುತ್ತಾರೋ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಹೊಸ ರೂಲ್ಸ್ ಮಾಡಬೇಕು.

ಶ್ರೀ ಎಚ್. ಜಿ. ನರಸಿಂಹೇಗೌಡ.—ಯಾವಾಗ ಮಾಡಬೇಕು ?

ಶ್ರೀ ಆರ್. ಚೆನ್ನಿಗರಾಮಯ್ಯ.—ಸಕಾಲದಲ್ಲಿ ಮಾಡುತ್ತೇವೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಈಗಾಗಲೇ ಜಿಲ್ಲಾ ಬೋರ್ಡ್‌ಗಳು ಹಿಂದಿರುವುದರಿಂದ ಈ ಸಮಿತಿಗಳನ್ನು ಮಾಡುವುದರಿಂದ ಇನ್ನೂ ಹಿಂದಕ್ಕೆ ಹೋಗುವುದಕ್ಕೆ ಸಾಧಕವಾಗುತ್ತದಲ್ಲವೇ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಅಲ್ಲ.

Sri V. S. PATIL.—May I know whether there are any rules or regulations for nominating these persons or whether it is completely within the discretion of the Government ?

Mr. SPEAKER.—The reply has been given so many times.

ಶ್ರೀ ಎಲ್. ಎಸ್. ವೆಂಕಾಜಿರಾವ್.—ಅಡ್ವೈಜರಿ ಸಮಿತಿಯಲ್ಲಿ ಮಾಜಿ ಜಿಲ್ಲಾಬೋರ್ಡ್ ಪ್ರೆಸಿಡೆಂಟರು ಗಳಿಗೂ ಮಾಜಿ ವೈಸ್ ಪ್ರೆಸಿಡೆಂಟರುಗಳಿಗೂ ಸ್ಥಾನ ದೊರಕಿದೆಯೇ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಇರಬಹುದು, ಗೊತ್ತಿಲ್ಲ.

Post of a Professor in Commerce College.

Q.—403. Sri G. N. PUTTANNA (Tumkur).—

Will the Government be pleased to state :—

(*a*) whether it is a fact that the post of a Professor in Commerce College was advertised a few months back ;

(*b*) whether it is a fact that a Committee was appointed to report to the Government the best candidate among the applicants ;

(*c*) who was the person recommended by the Committee ;

(*d*) whether the person recommended has been appointed to the post or other person ;

(*e*) if the latter is appointed the circumstances in which the recommondation of the Committee was not accepted ?

A.—Sri V. VENKATAPPA (Minister for Education).—

(*a*) Yes.

(*b*) No.

(*c, d & e*) Do not arise in view of the reply to clause (*b*).

ಶ್ರೀ ಜಿ. ಎನ್. ಪುಟ್ಟಣ್ಣ.—ಕಾಮರ್ಸ್ ಕಾಲೇಜಿ ನಲ್ಲಿ ಪ್ರೊಫೆಸರ ನೇಮಕಮಾಡುವ ಸಂದರ್ಭದಲ್ಲಿ ಅಮೆರಿಕಾಕ್ಕೆ ಹೋಗಿ ಓದಿ ಪಾಸುಮಾಡಿಕೊಂಡು ಬರದಿದ್ದವರು ಅರ್ಜಿ ಹಾಕಿಕೊಂಡಿದ್ದರೇ ?

ಶ್ರೀ ವಿ. ವೆಂಕಟಪ್ಪ.—ಗೊತ್ತಿಲ್ಲ.

ಶ್ರೀ ಜಿ. ಎನ್. ಪುಟ್ಟಣ್ಣ.—Best qualification ಇದ್ದವರನ್ನು ಚುನಾಯಿಸದೆಬಿಟ್ಟು ಕಡಮೆ ಅರ್ಹತೆ ಇರುವವರನ್ನು ನೇಮಕಮಾಡಿದ್ದಾರೆಂಬುದು ಗೊತ್ತಿದೆಯೇ ?

ಶ್ರೀ ವಿ ಕಟಪ್ಪ.—ಇಲ್ಲ.

ಶ್ರೀ ಜಿ. ಎನ್. ಪುಟ್ಟಣ್ಣ.—ಈ ನೇಮಕ ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಯಿತೋ ಅಥವ ಮಿನಿಸ್ಟರಿಂದ ತೀರ್ಮಾನವಾಯಿತೋ ?

ಶ್ರೀ ವಿ. ವೆಂಕಟಪ್ಪ.—ವಿಶ್ವವಿದ್ಯಾನಿಲಯದವರಿಂದ ತೀರ್ಮಾನವಾಯಿತು ; ಮಿನಿಸ್ಟರಿಂದಲೂ ಅಲ್ಲ, ಕ್ಯಾಬಿನೆಟ್‌ನಿಂದಲೂ ಅಲ್ಲ.

Sri H. V. KOUJALGI.—When was this post of Professor filled in ?

ಶ್ರೀ ವಿ. ವೆಂಕಟಪ್ಪ.—ಗೊತ್ತಿಲ್ಲ, ನೋಟೀಸ್ ಬೇಕು.

Sri H. V. KOUJALGI.—On whose recommendations ?

Sri V. VENKATAPPA.—On the recommendations of the University Council.

ಶ್ರೀ ಎಲ್. ಎಸ್. ವೆಂಕಾಜಿರಾವ್.—ವಿಶ್ವವಿದ್ಯಾನಿಲಯದವರು ಇದಕ್ಕೆ ಒಂದು ಸ್ಪೆಷಲ್ ಕಮಿಟಿಯನ್ನು ಮಾಡಿ ಆ ಕಮಿಟಿಯ ಅಭಿಪ್ರಾಯದ ಮೇಲಲ್ಲವೆ ನೇಮಕಮಾಡಲು ಶಿಫಾರಸು ಮಾಡಿದ್ದು ?

ಶ್ರೀ ವಿ. ವೆಂಕಟಪ್ಪ.—ಹೌದು.

Sri ANNA RAO GANAMUKHI.—May I know whether this post is outside the purview of the Public Service Commission ?

Sri V. VENKATAPPA.—Yes.

Sri V. P. DEENADAYALU NAIDU.—May I know how many applications were received for this appointment ?

Sri V. VENKATAPPA.—Notice please.

Sri V. P. DEENADAYALU NAIDU.—May I know what are the qualifications for this post and whether the tenure of the appointment is for a definite period or it is a regular appointment ?

Sri V. VENKATAPPA.—It is a regular appointment.

Sri A. R. KARISIDDAPPA.—Are there any special qualifications for this post ?

Sri V. VENKATAPPA.—Yes.

Sri A. R. KARISIDDAPPA.—What are they ?

Sri V. VENKATAPPA.—The required qualifications for the professorship.

Sri K. S. SURYANARAYANA RAO.—Was the Public Service Commission consulted and their opinion taken ?

Mr. SPEAKER.—That is outside the scope of the question.

Sri K. S. SURYANARAYANA RAO.—Has it come to the notice of the Government that the University Council had recommended a person who was not duly qualified ?

Sri V. VENKATAPPA.—No.